OS ನಂಬರಃ 35/2019

ಪಿ. ಡಬ್ಲ್ಯೂಃ 1

(ದಿನಾಂಕಃ 02-07-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .)

<u>ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದ,</u>

ನಾನು ಬಿ.ಎ.ವರೆಗೆ ಕಲಿತಿದ್ದೇನೆ. ದಾವಾ ಆಸ್ತಿ ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ನಮಗಿಲ್ಲ. ನನಗೆ 4 ಜನ ಸಹೋದರರು ಮತ್ತು ಒಬ್ಬರು ಸಹೋದರಿ ಇರುತ್ತಾರೆ. ನನ್ನ ಹಿರಿಯ ಅಣ್ಣ ಯಲ್ಲಾಪುರದಲ್ಲಿ ವಾಸಿಸುತ್ತಾರೆ. ಇನ್ನೊಬ್ಬ ಸಹೋದರ ಶಿರಸಿಯಲ್ಲಿ ವಾಸಿಸುತ್ತಾರೆ. ನನ್ನ ಸಹೋದರಿ ಕುಮಟಾದಲ್ಲಿ ವಾಸಿಸುತ್ತಾರೆ. ಮೂರನೇ ತಮ್ಮ ನನ್ನ ತಾಯಿಯ ಜೊತೆ ಅವರ ಆರೈಕೆ ಮಾಡುತ್ತಾ ಗ್ರಾಮದಲ್ಲೇ ಇರುತ್ತಾರೆ. ನಾನು ಬೇರೆ ಮನೆಯಲ್ಲಿದ್ದು, ದಾವಾ ಆಸ್ತಿಯಿಂದ ಅರ್ಧ ಕಿ.ಮೀ ದಲ್ಲಿ ನಾನು ವಾಸಿಸುವ ಮನೆ ಇದೆ. ನನ್ನ ಮೂರನೇ ತಮ್ಮನಾದ ಮಾರುತಿಗೆ ಯಾವುದೇ ಉದ್ಯೋಗ ಇಲ್ಲ ಎಂದರೆ ಸರಿ. ಆತನ ಖರ್ಚಿಗೆ ನಾನು ಹಾಗೂ ಉಳಿದ ಸಹೋದರರು ನೀಡುತ್ತಾರೆ. ನನ್ನ ಮೂರನೇ ತಮ್ಮ ಬಹಳ ಸರಾಯಿ ಕುಡಿತ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ತಮ್ಮ ಮಾರುತಿ ಕುಡಿದು ಬಂದು ನಮಗೆ ತೊಂದರೆ ಕೊಡುತ್ತಿದ್ದಾನೆ ಎಂದು 1 ನೇ ಪ್ರತಿವಾದಿ ಹೆಂಡತಿಯು 2-3 ಪೊಲೀಸ್ ಪ್ರಕರಣ ಸಲ್ಲಿಸಿದ್ದಳು ಎಂದರೆ ಗೊತ್ತಿಲ್ಲ. ಸದರಿ ಪಿರ್ಯಾದಿ ಸಂಬಂಧವಾಗಿ ನನ್ನ ತಮ್ಮನ ಪರ ವಹಿಸಿಕೊಂಡು ನಾನು ಠಾಣೆಗೆ ಹಾಜರಾಗಿದ್ದೆ ಎಂದರೆ ಸರಿ. 1 ನೇ ಪ್ರತಿವಾದಿ ಹೆಂಡತಿ ನನ್ನ ತಮ್ಮನ ಮೇಲೆ ಪೊಲೀಸ್ ಪಿರ್ಯಾದಿ ಮಾಡಿದ ಕಾರಣ ಅವರ ವಿರುದ್ಧ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಖರೀದಿಸುವ ಮೊದಲೇ ಬಿನ್ ಶೇತ್ಕಿಯಾಗಿ ಮಾರ್ಪಟ್ಟಿತ್ತು. ದಾವಾ ಆಸ್ತಿಯನ್ನು ಖರೀದಿಸುವ ಮೊದಲು ದಾಖಲೆಗಳನ್ನು ಪರಿಶೀಲಿಸಲಾಗಿದೆ. ದಾವಾ ಆಸ್ತಿ ಖರೀದಿಸುವ ಸಮಯದಲ್ಲಿ ಪರಿಶೀಲಿಸಿದ ಮೊದಲಿನ

ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಮ್ಮ ಚಿಕ್ಕಪ್ಪನು ದಾವಾ ಆಸ್ತಿಯನ್ನು ನನ್ನ ಅಜ್ಜಿಗೆ ದಾನಪತ್ರದ ಮುಖಾಂತರ ನೀಡಿರುತ್ತೇನೆ ಎಂದು ಹೇಳುತ್ತಿದ್ದು, ಆ ಕುರಿತು ಅಷ್ಟೊಂದು ನನಗೆ ಮಾಹಿತಿ ಇಲ್ಲ. ನನ್ನ ಅಜ್ಜಿಗೆ ದಾವಾ ಆಸ್ತಿಯ ಹಕ್ಕು ಪ್ರಾಪ್ತವಾಗುವಾಗ ಬಾವಿಯ ಹಕ್ಕು ಕುರಿತಾಗಿ ದಾಖಲೆಯಿಂದ ಪ್ರಾಪ್ತವಾಗಿರುತ್ತದೆ. ಸದರಿ ಬಾವಿಯಲ್ಲಿ ಹಕ್ಕಿರುವುದರ ಕುರಿತು ತೊಂಡಿಯಾಗಿ ನೀಡಿದ್ದು, ಆ ಕುರಿತು ನನ್ನ ಬಳಿ ದಾಖಲಾತಿ ಇಲ್ಲ.

ನಾನು ನೀಡಿದ ಮಾಹಿತಿ ಮೇರೆಗೆ ನಮ್ಮ ವಕೀಲರು ವಾದ ಪತ್ರದ ಜೊತೆ ಲಗತ್ತಿಸಿದ ಹಾತ್ ನಕಾಶೆಯನ್ನು ತಯಾರಿಸಿರುತ್ತಾರೆ. ನಮಗೆ 3-ಗುಂಟೆ ಆಸ್ತಿ ಹಾಗೂ ಪ್ರತಿವಾದಿಯರದ್ದು 5-ಗುಂಟೆ 4 ಮುಕ್ಕಾಲು-ಆಣೆ ಎಂದು ದಾವೆಯಲ್ಲಿ ಬರೆದಿದೆ ಎಂದರೆ ಸರಿ. ನಮ್ಮ ವಕೀಲರು ಸಲ್ಲಿಸಿದ ಹಾತ್ ನಕಾಶೆಯಲ್ಲಿ ಪ್ರತಿವಾದಿಯರ ಆಸ್ತಿಗಿಂತ ನಮ್ಮ ಆಸ್ತಿ ಆಕಾರದಲ್ಲಿ ದೊಡ್ಡದಾಗಿ ತೋರಿಸಲಾಗಿದೆ ಎಂದರೆ ಸರಿ. ವಿಷ್ಣು ವೆಂಕುಠ ಪ್ರಭುರವರು ದಿನಾಂಕಃ 16-06-1961 ರಂದು ಖರೀದಿಸಿದ ದಸ್ತಾವೇಜು ಓದಿಕೊಂಡಿಲ್ಲ. ಸದರಿ ವಿಷ್ಣು ವೆಂಕುಠ ಪ್ರಭುರವರು ಆಸ್ತಿ ಖರೀದಿಸಿದ ಕುರಿತು ವಾದ ಪತ್ರದ ಕಂಡಿಕೆ ಸಂಖ್ಯೆ 2 ರಲ್ಲಿ ಬರೆದಿದ್ದು, ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ವಕೀಲರಿಗೆ ನೀಡಿದ ನಂತರ ಬರೆದಿರುತ್ತಾರೆ. ದಿಃ 16-06-1961 ರಲ್ಲಿ ದಾವಾದಲ್ಲಿ ಹೇಳಲಾದ ಬಾವಿಯ ಕುರಿತು ನಮೂದು ಇದ್ದ ಬಗ್ಗೆ ನಾನು ಹೇಳಿಕೊಂಡಿಲ್ಲ. ದಾವಾದಲ್ಲಿ ಹೇಳಲಾದ ಬಾವಿ ಹಳೆಯ ಕಾಲದ ಬಾವಿ ಇದ್ದು, ವಿಷ್ಣು ವೆಂಕುಠ ಪ್ರಭುರವರು ಖರೀದಿಸುವ ಮೊದಲಿನಿಂದಲೂ ಅಸ್ತಿತ್ವದಲ್ಲಿತ್ತು. ಮಾಧವ ಕೃಷ್ಣಾ ರವರ ಕಡೆಯಿಂದ ವಿಷ್ಣು ವೆಂಕುಠ ಪ್ರಭುರವರು ಆಸ್ತಿ ಖರೀದಿಸುವ ಸಮಯದಲ್ಲಿ ಬಾವಿ ಇತ್ತು ಎಂದು ಹೇಳುವ ಯಾವುದೇ ದಾಖಲೆಯು ನನ್ನ ಬಳಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿ ಬಾವಿಯನ್ನು ಆ ಸಮಯದಲ್ಲಿ ನಮಗೆ ತೋರಿಸಿರುತ್ತಾರೆ ಎಂದು ಹೇಳುತ್ತಾರೆ. 1961 ರಲ್ಲಿ ನಾನು ಜನಿಸಿರಲಿಲ್ಲ ಎಂದರೆ ಸರಿ. ನಮ್ಮ ಹಾಗೂ ಪ್ರತಿವಾದಿಯರ ನಡುವೆ ಆಸ್ತಿಯ ಕುರಿತು ಹಿಸ್ಸಾ ಪೋಡಿಗಳಾಗಿರುತ್ತವೆ ಎಂದರೆ ಸರಿ.

1 ನೇ ಪ್ರತಿವಾದಿ ತಂದೆಯು ದಿನಾಂಕಃ 15–12–1976 ರಂದು ಆಸ್ತಿ ಖರೀದಿಸಿದ್ದಾನೆ ಎಂದರೆ ಇರಬಹುದು. ಸದರಿ ಬಾವಿಯಲ್ಲಿ ರಮೇಶ ಮೆಣಸು ನಾಯಕರವರಿಗೂ ಕೂಡ ಹಕ್ಕಿತ್ತು, ಆದರೆ ಅದನ್ನು ಕೂಡ ಪ್ರತಿವಾದಿಯರು ಬಂದ್ ಮಾಡಿಸಿರುತ್ತಾರೆ. ರಮೇಶ ಮೆಣಸು ನಾಯಕರವರು ಆಸ್ತಿಯನ್ನು ಯಾರಿಂದ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ರಮೇಶ ಮೆಣಸು ನಾಯಕರವರು ಆಸ್ತಿ ಖರೀದಿಸುವ ಮೊದಲೇ ಅವರ ಆಸ್ತಿಯಲ್ಲಿ ಬಾವಿ ತೊಡಲಾಗಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಂತರ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ಮನೆಗೆ ಮುನ್ಸಿಪಾಲಿಟಿ ನಲ್ಲಿಯ ಎರಡು ನೀರಿನ ಕನೆಕ್ಷನ್ ಇದೆ ಎಂದರೆ ಸರಿಯಲ್ಲ. ದಾವೆಯಲ್ಲಿ ಹೇಳಿದಂತಹ ಬಾವಿ ಅಸ್ತಿತ್ವದಲ್ಲಿಯೇ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಂದೆ ಆಸ್ತಿ ಖರೀದಿಸಿದ ನಂತರ ಆತ ಹೊಸದಾಗಿ ಬಾವಿ ನಿರ್ಮಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಬಾವಿಗಳನ್ನು ಆಗಾಗ ಸ್ವಚ್ಛಗೊಳಿಸಬೇಕಾಗುತ್ತದೆ ಎಂದರೆ ಸಾಕ್ಷಿ ಸದರಿ ಬಾವಿಯನ್ನು ಸ್ವಚ್ಛಗೊಳಿಸಲು ಪ್ರತಿವಾದಿ ಅಡೆ–ತಡೆ ಮಾಡಿರುತ್ತಾನೆ ಎಂದು ಹೇಳುತ್ತಾರೆ. ಸದರಿ ಬಾವಿ ಕಟ್ಟೆಗೆ ಸಿಮೆಂಟ್ ಹಾಕಿ ಕಟ್ಟೆ ನಿರ್ಮಿಸಲಾಗಿದೆ ಎಂದರೆ ಸಾಕ್ಷಿ ಅದನ್ನು ನಾವೇ ಮಾಡಿದ್ದೇವೆ ಎಂದು ಹೇಳುತ್ತಾರೆ. ಈ ವಿಷಯವನ್ನು ದಾವೆಯಲ್ಲಿ ಬರೆದಿಲ್ಲ ಎಂದರೆ ಸರಿ. ದಾವೆಯಲ್ಲಿ ತೋರಿಸಿದ ಬಾವಿ ಪ್ರತಿವಾದಿಯರಿಗೆ ಸಂಬಂಧಪಟ್ಟಿರುವುದರಿಂದ ಅದನ್ನು ಅವರೇ ಕಾಲ ಕಾಲಕ್ಕೆ ಸ್ವಚ್ಛಗೊಳಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೋಡಿಯು ನನ್ನ ತಂದೆಯ ಜೀವಿತಾವಧಿಯಲ್ಲಿ ಆಗಿದೆ. ಸದರಿ ಪೋಡಿ ಆದಾಗ ನಾನು ಅಂದಾಜು 30–35 ವರ್ಷದವನಿದ್ದೆ. ದಾವೆಯಲ್ಲಿ ತಿಳಿಸಿದ ಬಾವಿಯ ಹಕ್ಕು ರಮೇಶ ಮೆಣಸು ನಾಯಕರವರಿಗೆ ಇರದೇ ಇರುವುದರಿಂದ ಅದನ್ನು ಬೇರೆ ಬಾವಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಪ್ರತಿವಾದಿಯರು ತೊಂದರೆ ಕೊಟ್ಟಿರುವ ಕಾರಣ 5 ವರ್ಷದ ನಂತರ ಆತ ಬೇರೆ ಬಾವಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ರಮೇಶ ಮೆಣಸು ನಾಯಕರವರು ತಮ್ಮ ಬಾವಿ ನೀರನ್ನು ಮಾತ್ರ ಉಪಯೋಗಿಸುತ್ತಿದ್ದು, ದಾವೆಯಲ್ಲಿನ ಬಾವಿ ನೀರಿನ್ನು ಉಪಯೋಗಿಸುವುದಿಲ್ಲ ಎಂದರೆ ಸರಿ.

ದಾವೆಯಲ್ಲಿರುವ ಬಾವಿಯಲ್ಲಿ ಅರ್ಧ ಇಂಚು ಸಬ್ ಮರ್ಸಿಬಲ್ (ನೀರಿನಲ್ಲಿ ಮುಳುಗಿರುವ) ನೀರೆತ್ತುವ ಪಂಪನ್ನು ಕೂಡಿಸಲಾಗಿದೆ. ಸದರಿ ಸಬ್ ಮರ್ಸಿಬಲ್ ನೀರೆತ್ತುವ ಪಂಪ್ ಚಾಲು ಮಾಡಿದರೆ ಶಬ್ಧ ಬರುವುದಿಲ್ಲ ಎಂದರೆ ಸರಿಯಲ್ಲ, ಸಣ್ಣ ಪ್ರಮಾಣದಲ್ಲಿ ಶಬ್ಧ ಬರುತ್ತಿರುತ್ತದೆ ಎಂದು ಹೇಳುತ್ತಾರೆ. ಬಾವಿಯು ನೆಲದ ಸಮತಲದಿಂದ ಅಂದಾಜು 30-ಅಡಿ ಆಳದಲ್ಲಿದೆ. ಏಪ್ರೀಲ್-ಮೇ ದಲ್ಲಿ ಬಾವಿಯಲ್ಲಿ ಅಂದಾಜು 4- 5 ಅಡಿ ನೀರು ಇರುತ್ತದೆ. ನನ್ನ ತಮ್ಮ ಪ್ರತಿದಿನ ಬೆಳಿಗ್ಗೆ 7-ಗಂಟೆ ನೀರು ತುಂಬಿಸಿಕೊಳ್ಳುತ್ತಾನೆ. ಸದರಿ ನೀರಿನ ಪಂಪನ್ನು ಬಾವಿಗೆ ಅಳವಡಿಸಲು ಹೆಸ್ಕಾಂನಿಂದ ಅನುಮತಿ ಪಡೆದಿದ್ದೇವೆ. ಆ ಕುರಿತು ದಾಖಲೆ ನ್ಯಾಯಾಲಯಕ್ಕೆ ನೀಡಿರಬಹುದು. ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ದಾವೆ ಸಲ್ಲಿಸುವ ಮೂರ್ನಾಲ್ಕು ವರ್ಷಗಳ ಮೊದಲು ಬಲಾತ್ಕಾರದಿಂದ ಸದರಿ ದಾವೆಯಲ್ಲಿನ ಬಾವಿಗೆ ನೀರಿನ ಪಂಪ್ ಅಳವಡಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾಯಲ್ಲಿನ ಬಾವಿಯ ನೀರಿನ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ದಾವೆಯಲ್ಲಿನ ಬಾವಿ ನೀರಿನ ಹಕ್ಕು ಇದ್ದಿದ್ದರೆ ಆ ಕುರಿತು ದಾಖಲೆಯನ್ನು ಹಾಜರುಪಡಿಸುತ್ತೀದ್ದೀರಿ ಎಂದರೆ ತೊಂಡಿ ವಾಟ್ನಿ ಪ್ರಕಾರ ಹಕ್ಕಿದೆ ಎಂದು ಹೇಳಿದ ಮೇರೆಗೆ ಮೊದಲಿನಿಂದಲೂ ನೀರು ಎತ್ತುವ ಪಂಪ್ ಸೆಟ್ ಅಳವಡಿಸಲಾಗಿದೆ ಎಂದು ಹೇಳುತ್ತಾರೆ. ದಾವಾಯಲ್ಲಿನ ಬಾವಿ ಮೇಲೆ ಯಾವುದೇ ಹಕ್ಕು ಇರದಿದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.